**ಸಾಕ್ಷಿಯನ್ನು ದಿಃ 30.03.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎ.ಎಂ.ಆರ್. ವಕೀಲರಿಂದಃ**

3 ಮತ್ತು 4 ನೇ ಪ್ರತಿವಾದಿಗಳು ನನ್ನ ಮಕ್ಕಳು ಎಂದರೆ ಸರಿ. ಅವರು ನನ್ನೊಂದಿಗೆ ಅನ್ಯೋನ್ಯವಾಗಿದ್ದಾರೆ ಎಂದರೆ ಸರಿಯಲ್ಲ. 1, 2 ಮತ್ತು 5 ನೇ ಪ್ರತಿವಾದಿಯರು ನನ್ನ ಮಕ್ಕಳು ಎಂದರೆ ಸರಿ. ಅವರು ಹುಟ್ಟಿದಾಗಿನಿಂದ ನನ್ನೊಂದಿಗೆ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ವ್ಯವಸಾಯ ಬಿಟ್ಟು ಅವರಿಗೆ ಬೇರೆ ಕಾಯಂ ಉದ್ಯೋಗ ಇಲ್ಲ ಎಂದರೆ ಸರಿ. ನಿ ಪಿ 10 ನೋಂದಾಯಿತ ವಿಭಾಗ ಪತ್ರ ವನ್ನು ಮಾಡಿಕೊಳ್ಳುವ ಸಮಯದಲ್ಲಿ ನನ್ನ ಚಿಕ್ಕಮ್ಮಳ ಮಕ್ಕಳು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಕೆ.ಜಿ.ಎಫ್. ನ್ಯಾಯಾಲಯದಲ್ಲಿ ಅಸಲು ದಾವೆ ನಂಬರ್ 7/2011 ರಂತೆ ದಾವೆ ಹೂಡಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿ ಇದ್ದುದರಿಂದ, ಪ್ರಸ್ತುತ ದಾವಾ ಸ್ವತ್ತುಗಳನ್ನು ಹೊರತುಪಡಿಸಿ ಉಳಿದೆಲ್ಲಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡೆವು ಎಂದರೆ ಸರಿ. ಪರವನಹಳ್ಳಿ ಗ್ರಾಮದಲ್ಲಿ ನಮ್ಮದು ಪಟೇಲ್ ಕುಟುಂಬ ಎಂದರೆ ಸರಿ. ನಿ ಪಿ 10 ಅನ್ನು ಬರೆಯುವವರೆಗೂ ಒಟ್ಟು ಕುಟುಂಬದ ಆಸ್ತಿಗಳ ಉಸ್ತುವಾರಿಯನ್ನು ನಾನೇ ನೋಡಿಕೊಳ್ಳುತ್ತಿದ್ದೆ. ನಿ ಪಿ 10 ರಂತೆ ವಿಭಾಗ ಮಾಡಿಕೊಳ್ಳುವವರೆಗೂ ನನ್ನ ಮಕ್ಕಳಾದ ಪ್ರತಿವಾದಿಗಳು ವ್ಯವಸಾಯ ಮಾಡುತ್ತಿದ್ದರು, ನಾನು ಕುಟುಂಬದ ಉಸ್ತುವಾರಿ ನೋಡುತ್ತಿದ್ದೆ ಎಂದರೆ ಸರಿ.

ನಿ ಪಿ 1 ರಂತೆ ದಿನಾಂಕಃ9.7.1997 ರಲ್ಲಿ ದಾವಾ ಐಟಂ ನಂಬರ್ 1 ಅನ್ನು ನನ್ನ ಹೆಸರಿನಲ್ಲಿ ಖರೀದಿ ಮಾಡಲಾಯಿತು ಎಂದರೆ ಸರಿ. ನಿ ಪಿ 2 ರಂತೆ ದಿನಾಂಕಃ3.7.2000 ರಲ್ಲಿ ದಾವಾ ಐಟಂ ನಂಬರ್ 2 ಅನ್ನು ನನ್ನ ಹೆಸರಿನಲ್ಲಿ ಖರೀದಿ ಮಾಡಲಾಯಿತು ಎಂದರೆ ಸರಿ. ದಾವಾ ಸ್ವತ್ತುಗಳು ವ್ಯವಸಾಯದ ಜಮೀನುಗಳು ಎಂದರೆ ಸರಿ. ಕೆ.ಜಿ.ಎಫ್. ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದ್ದುದರಿಂದ ಪ್ರಸ್ತುತ ದಾವಾ ಸ್ವತ್ತುಗಳನ್ನು ಆಮೇಲೆ ವಿಭಾಗ ಮಾಡಿಕೊಳ್ಳೋಣ ಎಂದು ಎಲ್ಲರೂ ಒಪ್ಪಿಕೊಂಡಿದ್ದೆವು ಎಂದರೆ ಸರಿಯಲ್ಲ. ನನಗೆ ಯಾವುದೇ ಸರ್ಕಾರಿ ಕಾಯಂ ನೌಕರಿ ಇಲ್ಲ

ಎಂದರೆ ಸರಿ. ನಮ್ಮ ಒಟ್ಟು ಕುಟುಂಬದ ಆದಾಯವನ್ನು ಬಿಟ್ಟು ನನಗೆ ಬೇರೆ ಯಾವುದೇ ಆದಾಯ ಇಲ್ಲ ಎಂದರೆ ಸರಿ. ಒಟ್ಟು ಕುಟುಂಬದ ಆಸ್ತಿಗಳ ಆದಾಯದಿಂದ ದಾವಾ ಸ್ವತ್ತುಗಳನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ ಪಿ 10 ರಲ್ಲಿ ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ 40 ಎಕರೆ ಜಮೀನನ್ನು ವಿಬಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ 40 ಎಕರೆ ಜಮೀನಿನಿಂದ ಬಂದಂತಹ ಆದಾಯದಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಖರೀದಿಸಿದ ದಿನದಿಂದ ಇಲ್ಲಿಯವರೆಗೂ ನನ್ನ ಮಕ್ಕಳಾದ ಪ್ರತಿವಾದಿಗಳು ಮತ್ತು ನಾನು ಸದರಿ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಅಸಲು ದಾವೆ 7/2011 ದಾವೆಯು 2016 ರಲ್ಲಿ ಇತ್ಯರ್ಥವಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರಸ್ತುತ ದಾವೆಯಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ಚಿಕ್ಕಮ್ಮಳ ಮಕ್ಕಳಿಗೆ ಯಾವುದೇ ಹಕ್ಕಿಲ್ಲ ಎಂದು ಇತ್ಯರ್ಥವಾಯಿತು ಎಂದರೆ ಸರಿ. ಸದರಿ ದಾವೆ ಇತ್ಯರ್ಥವಾದ ಮೇಲೆ 1, 2 ಮತ್ತು 5 ನೇ ಪ್ರತಿವಾದಿಗಳು ದಾವಾ ಆಸ್ತಿಗಳಲ್ಲಿ ಭಾಗ ಮಾಡಿಕೊಡು ಎಂದು ಕೇಳಿದರು ಎಂದರೆ ಸರಿಯಲ್ಲ. ಅವರಿಗೆ ಭಾಗ ಕೊಡಬೇಕಾಗುತ್ತದೆ ಮತ್ತು ಅದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಪ್ರಸ್ತುತ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳ ಆದಾಯದಿಂದ ಖರೀದಿಸಿದ ಆಸ್ತಿಗಳಾಗಿದ್ದು, ಅವುಗಳಲ್ಲಿ ನನಗೆ ಯಾವುದೇ ಸ್ವಯಾರ್ಜಿತ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಅಜಿತ್ ದೇವರಮನಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**